**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 542/2018**

**ಚಾ.ಸಾ.** 2

**ಪ್ರಾ.ಸಾ.** 2

**ದಿನಾಂಕಃ08.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರಿಯಾಜ್ ಅಹಮ್ಮದ |
| ತಂದೆಃ ಗಂಡನ ಹೆಸರು | ಮತ್ತೆಸಾಬ್ |
| ಉದ್ಯೋಗ | ಚಾಲಕ |
| ವಯಸ್ಸು | 53 |
| ವಾಸಸ್ಥಳ | ಹುಬ್ಬಳ್ಳಿ |

**ಪ್ರಾರಂಭ ಸಮಯಃ 01.05 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು.

ದಿಃ23.03.2018 ರಂದು ಸಾತೂ ಸೈಯದ್ ದರ್ಗದ ಹತ್ತಿರ ರಸ್ತೆಯ ಮೇಲೆ ಅಪಘಾತವಾದಂತಹ ಸ್ಥಳದಲ್ಲಿ ನಿಪಿ2 ಕ್ಕೆ ನಾನು ಸಹಿ ಮಾಡಿರುತ್ತೇನೆ. ಪ್ರಾಸಾ1 ರವರು ಅಪಘಾತವಾದಂತಹ ಸ್ಥಳವನ್ನು ಪೊಲೀಸರಿಗೆ ಮತ್ತು ನಮಗೆ ತೋರಿಸಿದರು. ಪೊಲೀಸರು ಸದರಿ ಸ್ಥಳದಲ್ಲಿ ನನ್ನ ಮತ್ತು ಚಾಸಾ3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಹಾಥ ನಕಾಶೆಯನ್ನು ತಯಾರು ಮಾಡಿದರು. ಸಾಕ್ಷಿಗೆ ನಿಪಿ3 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 (ಬಿ) ಎಂದು ಗುರುತಿಸಲಾಯಿತು.

ನಿಪಿ2 ಮತ್ತು 3 ರಲ್ಲಿರುವ ಅಂಶಗಳನ್ನು ನಮಗೆ ಪೊಲೀಸರು ಓದಿ ಹೇಳಿದರು. ನಂತರ ನಾನು ಸಹಿ ಮಾಡಿದೆ. ನಿಪಿ2 ಮತ್ತು 3 ನ್ನು ಮಧ್ಯಾಹ್ನ 12.00 ಯಿಂದ 01.00 ವರೆಗೆ ಬರೆದರು.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ ಎ ಆರ್ ಜಿ ವಕೀಲರಿಂದ**

ನಾನು 9 ನೇ ತರಗತಿಯಲ್ಲಿ ಅನುತ್ತೀರ್ಣನಾಗಿದ್ದೇನೆ. ಮೃತ ಸೌಕತ್ ನನ್ನ ಅಣ್ಣನ ಮಗ. ನಿಪಿ2 ಮತ್ತು 3 ನ್ನು ಅಪಘಾತವಾದ ಸ್ಥಳದಲ್ಲಿ ಬರೆದಿರುತ್ತಾರೆ. ಪಂಚನಾಮೆ ಮಾಡಿರುವ ವಿಚಾರಗಳನ್ನು ನಿಪಿ2 ರಲ್ಲಿ ಬರೆಯಲಾಗಿದೆ. ಯಾವುದೇ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚನಾಮೆಯನ್ನು ಮಾಡಿದರು ಮತ್ತು ಭಾವಚಿತ್ರವನ್ನು ತೆಗೆದರು ಎಂದು ನುಡಿಯುತ್ತಾರೆ. ಮೃತ ಸೌಕತ್ ನನ್ನ ಸಂಬಂಧಿಕನಾದ್ದರಿಂದ ಅವರ ಕುಟುಂಬದವರಿಗೆ ಪರಿಹಾರ ಕೊಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕ್ಕು ಬಂದಿ ಗೊತ್ತಿಲ್ಲ. ನಿಪಿ2 ನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಮಾಡಿರುತ್ತಾರೆ. ನನ್ನ ಸಹಿಯನ್ನು ಅದೇ ಸಮಯದಲ್ಲಿ ಪಡೆದುಕೊಂಡರು. ನಾನು ಯಾವುದೇ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಸದರಿ ಪಂಚನಾಮೆ ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**